<u>ದಿನಾಂಕಃ **29.01.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಕೆ ವಿ ವಕೀಲರಿಂದಃ</u>

ನನಗೆ ಈ ಅರ್ಜಿಯ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ಮೂಲ ದಾವೆ ಸಂಖ್ಯೆ ನನಗೆ ಗೊತ್ತಿರುವುದಿಲ್ಲ ಸದರಿ ದಾವೆಯನ್ನು ಸತೀಶ್ ಇವರು ಶ್ರೀನಿವಾಸ ಮತ್ತು ಜಯ್ಯಮ್ಮ ಇವರ ಮೇಲೆ ಹಾಕಿದ್ದರು. ಸದರಿ ದಾವೆ ಹಾಕಿ ಒಂದು ಒಂದುವರೆ ವರ್ಷ ಆಗಿರುತ್ತದೆ. ಸದರಿ ದಾವೆಯಲ್ಲಿ ಅನೂಸೂಚಿತ ಸ್ವತ್ತುಗಳು ಯಾವುವು ಇದ್ದವು ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಮ್ಮ ವಕೀಲರಾದ ಮಹೇಂದ್ರ ಮತ್ತು ಸುಧೀರ್ ಕುಮಾರ್ ಮಾಹಿತಿ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಬಗ್ಗೆ ಮೊದಲು ನನಗೆ ಮಾಹಿತಿ ಇರಲಿಲ್ಲ ಸಾಕ್ಷಿ ಮುಂದುವರೆದು ಗಲಾಟೆ ಬಗ್ಗೆ ಗೊತ್ತಿತ್ತು ಎಂದು ಉತ್ತರಿಸುತ್ತಾರೆ. ಗಲಾಟೆ ಆದ ಜಾಗ ಬಿಲಗದ್ದೆ ಗ್ರಾಮದ್ದು ಇದ್ದು ಅದರ ಸರ್ವೆ ನಂಬರ್ ಗೊತ್ತಿರುವುದಿಲ್ಲ. ಸದರಿ ಆಸ್ತಿ ಜಯಮ್ಮ ಕೋಂ ಗೋಪಾಲ ಗೌಡ ಮಾಲೀಕರಿದ್ದು ಒಟ್ಟು 9 ಎಕರೆ ಜಮೀನು ಇತ್ತು. ಸದರಿ ಆಸ್ತಿ ಜಯಮ್ಮ ಕೋಂ ಗೋಪಾಲ ಗೌಡರ ಹೆಸರಿನಲ್ಲಿ ಇರುತ್ತದೆ ಆದರೆ ಅದಕ್ಕೆ ಸಂಬಂಧಪಟ್ಟ ದಾಖಲೆ ನೋಡಿರುವುದಿಲ್ಲ.

2.ಜಯಮ್ಮನವರ ವಾಸದ ಮನೆ ಎಷ್ಟು ವಿಸ್ತೀರ್ಣದಲ್ಲಿ ಮತ್ತು ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಜಯಮ್ಮ ಇವರಿಗೆ ಯಾವ ವರ್ಷ ಮನೆ ಮಂಜೂರು ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ ಆದರೆ ಮನೆ ಇದ್ದು ಆ ಬಗ್ಗೆ ದಾಖಲೆ ನೋಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 222 ಬಿಲಗದ್ದೆ ಗ್ರಾಮದ ಆಸ್ತಿ ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಜಯಮ್ಮನವರ ಮನೆ ಸರ್ವೆ ನಂಬರ್ 222 ಅಥವಾ 223 ರಲ್ಲಿ ಬರುತ್ತದೆಯಾ ಎಂಬ ಬಗ್ಗೆ ನನಗೆ ಸರಿಯಾದ ಮಾಹಿತಿ ಇರುವುದಿಲ್ಲ. ಸರ್ವೆ ನಂಬರ್ 222 ಮತ್ತು 223 ಹಿಡುವಳಿ ಜಾಗ ಅಥವಾ ಸರ್ಕಾರಿ ಜಾಗ ಬರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಅವೆರಡೂ ಜಯಮ್ಮನವರ ಹಿಡುವಳಿ ಜಾಗ ಎಂದು ಉತ್ತರಿಸುತ್ತಾರೆ.

3. ಜಯಮ್ಮನವರ ವಾಸದ ಮನೆ ಮತ್ತು ಕೊಟ್ಟಿಗೆ ಹೊಂದಿಕೊಂಡು ಇರುತ್ತದೆ. ಸದರಿ ಕೊಟ್ಟಿಗೆ ಮತ್ತು ವಾಸದ ಮನೆ ಅಂದಾಜು 200x200 ಅಡಿ ವಿಸ್ತೀರ್ಣದಲ್ಲಿ ಇರುತ್ತದೆ. ಜಯಮ್ಮನವರ ಮನೆಯ ಮುಂದೆ ಹಾದು ಹೋಗವ ಸರ್ಕಾರಿ ರಸ್ತೆ ಇದ್ದು ಅಲ್ಲಿ ಜಯಮ್ಮನವರು ರಸ್ತೆಯ ಇಕ್ಕೆಲಗಳಲ್ಲಿ ತಂತಿ ಬೇಲಿಯನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ಜಯಮ್ಮನವರ ಮನೆಯ ಮುಂದಿನ ರಸ್ತೆಯ ಬಲ ಭಾಗಕ್ಕೆ ಅವರು ಒತ್ತುವರಿ ಮಾಡಿದ ಜಮೀನು ಇರುತ್ತದೆ ಎಂದರೆ ಸಾಕ್ಷಿ ಅದು ಅವರ ಜಮೀನು ಇರುತ್ತದೆ ಎಂದು ಉತ್ತರಿಸುತ್ತಾರೆ. ಜಯಮ್ಮನವರ ವಾಸದ ಮನೆಯ ನಂತರ ಮಂಜುನಾಥ ಇವರ ವಾಸದ ಮನೆ ಇರುತ್ತದೆ ಎಂದರೆ ಸರಿ. ಮಂಜುನಾಥ ಗೌಡ ಇವರ ಮನೆ ಪಕ್ಕದಲ್ಲಿ ಅರ್ಜಿದಾರ ಸತೀಶ್ ಮತ್ತು ಅವರ ಹೆಂಡತಿ ಭವಾನಿ ಇವರ ಹಿಡುವಳಿ ಜಮೀನು ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮಂಜುನಾಥ ಗೌಡ ಮನೆ ಹಾಗೂ ಸತೀಶ್ ಇವರ ಜಮೀನಿಗೆ ಜಯಮ್ಮನವರ ಮನೆಯ ಮುಂದಿನ ರಸ್ತೆಯ ಮುಖಾಂತರ ಹಾದು ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಯಮ್ಮನವರು ಮನೆಯವರೆಗೆ ಮಾತ್ರ ರಸ್ತೆ ಇದ್ದು ಮುಂದೆ ರಸ್ತೆ ಇಲ್ಲ ಎಂದು ಉತ್ತರಿಸುತ್ತಾರೆ.

4. ಮಂಜುನಾಥ ಗೌಡ ಮತ್ತು ಸತೀಶ್ ಇವರ ಜಮೀನುಗಳಿಗೆ ನಾನು ಕಂದಾಯ ದಾಖಲೆಗಳನ್ನು ನೋಡಿರುವುದಿಲ್ಲ. ಮಂಜುನಾಥ ಗೌಡ ಇವರ ಕಡೆಯಿಂದ ಸತೀಶ್ ಮತ್ತು ಭವಾನಿ ಅನುಸೂಚಿತ ಸ್ವತ್ತುಗಳ ಪೈಕಿ ಒಂದು ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಅನುಸೂಚಿತ ಆಸ್ತಿಗಳ ಪೈಕಿ ಒಂದು ಆಸ್ತಿ ಸತೀಶ್ ಇವರಿಗೆ ತಮ್ಮ ಕುಟುಂಬದಿಂದ ಬಂದಿರುತ್ತದೆ ಎಂದರೆ ಸರಿ. ಜಯಮ್ಮ, ಸತೀಶ ಮತ್ತು ಮಂಜುನಾಥ ಗೌಡ ಇವರು ಒಂದು ಕುಟುಂಬಕ್ಕೆ ಸೇರಿದ ಸದಸ್ಯರು ಇರುತ್ತಾರೆ ಎಂದರ ಸರಿ. ಮಂಜುನಾಥ ಗೌಡ ಮತ್ತು ಸತೀಶ್ ಇವರ ಜಮೀನುಗಳಿಗೆ ಸರ್ಕಾರಿ ರಸ್ತೆಯ ಮುಖಾಂತರ ಹಾದು ಹೋಗಬೇಕು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಕಾಲು ದಾರಿಯ ಮುಖಾಂತರ ಹಾದು ಹೋಗುತ್ತಿದ್ದರು ಎಂದು ಉತ್ತರಿಸುತ್ತಾರೆ. ಸರ್ಕಾರಿ ರಸ್ತೆಗೆ ಜಯಮ್ಮ ಗೇಟು ಅಳವಡಿಸಿರುತ್ತಾರೆ ಎಂದರೆ ಸಾಕ್ಷಿ ಗೇಟು ಇರುತ್ತದೆ ಎಂದು ಉತ್ತರಿಸುತ್ತಾರೆ.

5. ನಿಪಿ- 2 ರಿಂದ 5 ಮತ್ತು 7 ರಲ್ಲಿ ಜಯಮ್ಮನವರ ಮನೆ ಕಾಣುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ- 4 ನ್ನು ತೋರಿಸಲಾಗಿ ನಿಪಿ- 4 ರ ಎರಡು ಬದಿಯ ತಂತಿಯ ಬೇಲಿಯ

ನಡುವೆ ಹಾದು ಹೋಗುವ ರಸ್ತೆ ಸರ್ಕಾರಿ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಸರ್ಕಾರಿ ರಸ್ತೆಗೆ ಅಡ್ಡಲಾಗಿ ನಿಪಿ- 6 ರಲ್ಲಿ ಕಾಣಿಸಿದಂತ ಕಬ್ಬಿಣದ ಗೇಟನ್ನು ನಿರ್ಮಿಸಲಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಮನೆಗೆ ಗೇಟು ಇರುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ- 6 ರಲ್ಲಿ ನನ್ನ ಭಾವಚಿತ್ರ ಇರುತ್ತದೆ ಎಂದರೆ ಸಾಕ್ಷಿ ನಾನು ಅವರ ಮನೆಯ ಗೇಟಿನ ಮುಂಭಾಗ ನಿಂತಿರುತ್ತೇನೆ ಎಂದು ಉತ್ತರಿಸುತ್ತಾರೆ.

6. ನ್ಯಾಯಾಯದ ಆದೇಶದ ಮೇರೆಗೆ ವಿಠಲ್ ವಡವಾನಿ ಮತ್ತು ಅವರ ಸಿಬ್ಬಂಧಿ ಬಂದಾಗ ಫೋಟೋ ತೆಗೆದಿರುತ್ತಾರೆ ಎಂದರೆ ಸಾಕ್ಷಿ ಅವರು ಬಂದಿರುತ್ತಾರೆ ಆದರೆ ನ್ಯಾಯಾಲಯದ ಆದೇಶದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ- 4 ರಲ್ಲಿ ರಸ್ತೆಯ ಮಧ್ಯಭಾಗದಲ್ಲಿ ಎರಡು ಎಳೆಯ ತಂತಿಯನ್ನು ರಸ್ತೆಗೆ ಅಡ್ಡಲಾಗಿ ಕಟ್ಟಲಾಗಿರುತ್ತದೆ ಎಂದರೆ ಸಾಕ್ಷಿ ಅಲ್ಲಿ ಯಾವುದೇ ತಂತಿ ಅಡ್ಡಲಾಗಿ ಕಟ್ಟಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ-4 ರಲ್ಲಿ ರಸ್ತೆಗೆ ಅಡ್ಡಲಾಗಿ ತಂತಿಯನ್ನು ಕಟ್ಟಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರ ತಂತಿಗೆ ಒಂದು ಬಟ್ಟೆಯನ್ನು ನೇತು ಹಾಕಲಾಗಿರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಅವರ ಮನೆಗೆ ಸಂಬಂಧಿಸಿದ ಜಾಗ ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

7. ನ್ಯಾಯಾಲಯದ ಆದೇಶದ ಮೇರೆಗೆ ಸತೀಶ್ ಇವರು ಗೇಟ್ ನಿಂದ ಮುಂದೆ ಹೋಗಲು ನಾನು ಹಾಗೂ ಎದುರುದಾರರು ಸ್ಥಳದಲ್ಲಿ ಇದ್ದೆವು ಎಂದರೆ ಸರಿ. ಸದರಿ ಜಯಮ್ಮನ ಮನೆ ಮುಂದಿನಿಂದ ಮಂಜುನಾಥ ಗೌಡ ಮತ್ತು ಸತೀಶ್ ಇವರ ಜಾಗಕ್ಕೆ ಹೋಗಲು ಕಾಲು ದಾರಿ ಇರುವ ಬಗ್ಗೆ ನಾನು ಕಂದಾಯ ದಾಖಲೆ ನೋಡಿರುತ್ತೇನೆ ಸಾಕ್ಷಿ ಮುಂದುವರೆದು ನಾಕಶೆಯಲ್ಲಿ ಕಂಡಂತೆ ಬೇರೆ ದಾರಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಕಾಲು ದಾರಿ ಸುಮಾರು 5 ಅಡಿ ಅಗಲ ಇದ್ದು 600 ಮೀಟರ್ ಉದ್ದ ಇರುತ್ತದೆ. ಸದರಿ ಕಾಲು ದಾರಿ ಸರ್ವೆ ನಂಬರ್ 137 ರಿಂದ ಪ್ರಾರಂಭವಾಗಿ ಸರ್ವೆ ನಂಬರ್ 208 ರಲ್ಲಿ ಅಂತ್ಯವಾಗುತ್ತದೆ. ಮಂಜುನಾಥ ಗೌಡ ಇವರು ತಮ್ಮ ಮನಗೆ ಜಯಮ್ಮನವರ ತುಳಸಿಕಟ್ಟೆಯನ್ನು ಬಳಸಿಕೊಂಡು ತಮ್ಮ ಜಾಗಕ್ಕೆ ಹೋಗುತ್ತಾರೆ.

8. ನ್ಯಾಯಾಲಯದ ಆದೇಶದಂತೆ ವಿಠಲ್ ವಡವಾನಿ ಇವರು ರಕ್ಷಣೆ ಕೊಡಲು ಬಂದಾಗ ನಾನು ರಸ್ತೆಯ ಗೇಟ್ ಗೆ ಅಡ್ಡಲಾಗಿ ನಿಂತಿದ್ದೆ ಎಂದರೆ ಸರಿಯಲ್ಲ. ಆ ದಿನ ಸ್ಥಳಕ್ಕೆ

ಪೊಲೀಸರು 5-6 ಜನ ಬಂದಿದ್ದರು ನಮ್ಮ ಬೆಂಬಲಿಗರೂ ಯಾರು ಬಂದಿರಲಿಲ್ಲ. ಆ ದಿನ ವಿಠಲ್ ವಡವಾನಿ ಇವರಿಗೆ ಜಯಮ್ಮನವರ ಮನೆಯಿಂದ ರಸ್ತೆ ಇಲ್ಲದಿರುವ ಬಗ್ಗೆ ಹೇಳಿದ್ದು ಯಾವುದೇ ದಾಖಲೆ ತೋರಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಸರ್ವೆಯವರು ಬಂದಿದ್ದರು ಎಂದು ಉತ್ತರಿಸುತ್ತಾರೆ. ಆ ದಿನ ನಾನು ಸತೀಶ್ ಮತ್ತು ಅವರ ಹೆಂಡತಿಯನ್ನು ಗೇಟ್ ನಿಂದ ಒಳಗೆ ಹೋಗದಂತೆ ತಡೆದಿರುತ್ತೇನೆ ಎಂದರೆ ಸಾಕ್ಷಿ ಸರ್ಕಾರಿ ಜಾಗಕ್ಕೆ ಹೋಗದಂತೆ ನಾನು ತಡೆದಿರುವುದಿಲ್ಲ ಎಂದು ಉತ್ತರಿಸುತ್ತಾರೆ ಸಾಕ್ಷಿ ಮುಂದುವರೆದು ಅವರ ಸ್ವಾಧೀನ ಜಾಗಕ್ಕೆ ಹೋಗಲು ಅವಕಾಶ ಇಲ್ಲ ಎ

9. ಜಯಮ್ಮನವರ ಗೇಟ್ ನಿಂದ ಒಳಗೆ ಇರುವ ಜಾಗ ಅವರ ಸ್ವಾಧೀನದಲ್ಲಿ ಇರುವ ಬಗ್ಗೆ ನಾನು ದಾಖಲೆಯನ್ನು ನೋಡಿರುತ್ತೇನೆ. ಗೇಟಿನ ಒಳಗಡೆ ಯಾವ ಯಾವ ಸರ್ವೆ ನಂಬರ್ ಬರುತ್ತದೆ ಎಂದು ಗೊತ್ತಿರುವುದಿಲ್ಲ ಆದರೆ ಅದರ ವಿಸ್ತೀರ್ಣ 9 ಎಕರೆ ಜಾಸ್ತಿ ಇರುತ್ತದೆ. ಗೇಟ್ ನಿಂದ 15-20 ಅಡಿ ದೂರದಲ್ಲಿ ಸತೀಶ್ ಇವರ ಹಿಡುವಳಿ ಜಮೀನು ಬರುತ್ತದೆ ಎಂದರೆ ಸಾಕ್ಷಿ ಸುಮಾರು 50 ಮೀಟರ್ ದಾಟಿದ ನಂತರ ಅವರ ಜಮೀನು ಬರುತ್ತದೆ ಎಂದು ಉತ್ತರಿಸುತ್ತಾರೆ. ವಿಠಲ್ ವಡವಾನಿ ಸ್ಥಳಕ್ಕೆ ಬಂದಾಗ ಜಯಮ್ಮ ಇವರು ಸತೀಶ್ ಮತ್ತು ಅವರ ಹೆಂಡತಿಯನ್ನು ಒಳಗೆ ಹೋಗಲು ಬಿಟ್ಟುರುವುದಿಲ್ಲ ಎಂದರೆ ಸಾಕ್ಷಿ ಅವರ ಸ್ವಾಧೀನ ಜಾಗಕ್ಕೆ ಹೇಗೆ ಬಿಟ್ಟುಕೊಳ್ಳುತ್ತಾರೆ ಎಂದು ಉತ್ತರಿಸುತ್ತಾರೆ. ಜಯಮ್ಮನವರ ಸ್ವಾಧೀನ ಜಾಗಕ್ಕೆ ಚೆಕ್ಕುಬಂಧಿ ಗೊತ್ತಿರುವುದಿಲ್ಲ. ವಿಠಲ್ ವಡವಾನಿ ಇವರು ಸತೀಶ್ ಇವರಿಗೆ ಗೇಟ್ ನಿಂದ ಒಳಗೆ ಹೋಗಲು ಬಿಟ್ಟಿರುವುದಿಲ್ಲ ಎಂದರೆ ಸಾಕ್ಷಿ ವಿಠಲ್ ವಡವಾನಿ ಒಳಗೆ ಓಡಾಡಿರುತ್ತಾರೆ ಆದರೆ ಸತೀಶ್ ಇವರನ್ನು ಬಿಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-18 ರಲ್ಲಿ ಸುಧೀರ್ ಕುಮಾರ್ ಮುರೋಳ್ಳಿ ಇರುತ್ತಾರೆ ಎಂದರೆ ಸರಿ. ವಿಠಲ್ ವಡವಾನಿ ಸ್ಥಳಕ್ಕೆ ಬಂದಾಗ ನಾನಾಗಲೀ ಮತ್ತು ಜಯಮ್ಮ ಮತ್ತು ಅವರ ಕುಟುಂಬದವರಾಗಲೀ ಯಾವುದೇ ದಾಖಲೆಯನ್ನು ತೋರಿಸಿಲ್ಲ ಎಂದರೆ ಸರಿ. ನಾನು ಮತ್ತು ಉಳಿದ ಎದುರುದಾರರು ನ್ಯಾಯಾಲಯದ ಆದೇಶದವನ್ನು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ತಿಗೆ ಸಂಬಂಧಿಸಿದ ಯಾವುದೇ ದಾಖಲೆಗಳು ಇರದೇ ಇದ್ದರು ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ